■ ವಿಶಾಖ ಎನ್.



# ಕಲ್ಕಿ ಏನೇನೋ ಗಿಲ್ಕಿ

ಸುಪ್ರೀಂ ಯಾಸ್ಕಿನ್ ಯಾರು? ಮಹಾಭಾರತದ ಕರ್ಣ ಭೈರವ ಆಗಲು ಹೇಗೆ ಸಾಧ್ಯ? ಅಶ್ವತ್ಥಾಮ ಎಂಟಡಿ ಆಳಾಗಿ ಹಾಗೆಲ್ಲ ಹೊಡೆದಾಡುವುದು ಉಂಟೆ? ಯಾರದೋ ಗರ್ಭದ ಸಾರವನ್ನು ಎತ್ತಿಕೊಂಡು ಚುಚ್ಚುಮದ್ದು ಕೊಟ್ಟುಬಿಟ್ಟರೆ, ಆ ದಿವ್ಯಶಕ್ತಿ ಇನ್ನೊಂದು ದೇಹದಲ್ಲಿ ಒಡಮೂಡುವ ಪರಿಕಲ್ಪನೆ ಬಾಲಿಶವಲ್ಲವೆ? ಇದು ವೈದಿಕ ಪ್ರಜ್ಞೆಯ ಚಿತ್ರವಾ? – ನಿರ್ದೇಶಕ ನಾಗ್ ಅಶ್ವಿನ್ ತಲೆಯೊಳಗೆ ಬಿಟ್ಟಿರುವ ಹುಳುಗಳು ಇಷ್ಟೆಲ್ಲ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಇನ್ನೂ ಮುಂದುವರಿದು, ಮಹಾಭಾರತದ ಕರ್ಣ, ಅಶ್ವತ್ಥಾಮ, ದ್ರೋಣಾಚಾರ್ಯರ ಬಯಾಗ್ರಫಿಗಳು, ವ್ಯಕ್ತಿಚಿತ್ರಗಳ ಹುಡುಕಾಟ ನಡೆಸಿರುವವರೂ ಇದ್ದಾರೆ.

ಹಾಲಿವುಡ್‌ನಲ್ಲಿ ದೊಡ್ಡ ದೊಡ್ಡ ಸ್ಟುಡಿಯೊಗಳು ನಿರ್ಮಿಸುವ ಸಿನಿಮಾಗಳಲ್ಲಿ ಹೀಗೊಂದು ಕಥಾಪರಿಸರ ಕಟ್ಟಿಕೊಂಡು ಒಂದಾದ ಮೇಲೆ ಒಂದು ಉಪಕಥೆ ಹೆಣೆಯುತ್ತಾ ಹೋಗುವ ಯಶಸ್ವಿ ತಂತ್ರವೊಂದು ದಶಕಗಳಿಂದಲೂ ನಡೆದಿದೆ. ಸ್ಪೈಡರ್‌ಮ್ಯಾನ್, ಬ್ಯಾಟ್‌ಮ್ಯಾನ್, ಜೇಮ್ಸ್‌ಬಾಂಡ್, ಐರನ್ ಮ್ಯಾನ್ ತರಹದ ಸೂಪರ್‌ಹೀರೊಗಳನ್ನು ನೋಡಿಕೊಂಡು ತಲೆಮಾರುಗಳು ಮನರಂಜನೆಯ ಮೊಗಸಾಲೆಗಳಲ್ಲಿ ಅಡ್ಡಾಡಿ ಆಗಿದೆ. ಅಂತಹದೇ ಒಂದು ಕಾರಿಡಾರನ್ನು ತಾನೂ ಸೃಷ್ಟಿಸಬಲ್ಲೆ ಎಂದು ನಾಗ್ ಅಶ್ವಿನ್ ತೋರಿದ್ದಾರೆ.

ಮಹಾಭಾರತ, ರಾಮಾಯಣದ ಉಪಕಥೆಗಳ ಪಾತ್ರಗಳ ಪುನರ್‌ಸೃಷ್ಟಿಗೆ ಕೊನೆಯೇ ಇಲ್ಲ. ರಾಜಮೌಳಿ, ಯೋಗರಾಜ ಭಟ್ ಅವರಂತಹ ನಿರ್ದೇಶಕರು ಕೂಡ ನಾವು ಯಾವುದೇ ಕಥೆ ಹೊಸೆದರೂ, ಪುರಾಣಸಾರದ ಒಂದಂಶ ಅದನ್ನು ಹೋಲಬಹುದು ಎನ್ನುವುದನ್ನು ಆಗೀಗ ಹೇಳುತ್ತಲೇ ಬಂದಿದ್ದಾರೆ. ಅದನ್ನೇ ನಾಗ್ ಅಶ್ವಿನ್ ತುಸು ವಾಚ್ಯವಾಗಿ ತೆರೆಮೇಲೆ ತಂದಿದ್ದಾರಷ್ಟೆ.

'ಕಲ್ಕಿ 2898 ಎಡಿ' ಎನ್ನುವ ಶೀರ್ಷಿಕೆಯು ಇದು ಮಹಾಭಾರತವೋ, ರಾಮಾಯಣವೋ ಎಂಬ ಕಲ್ಪನೆಗೆ ಇಂಬುಗೊಟ್ಟಿರಲಿಲ್ಲ. ಇದು ಕಲಿಯುಗ ಆದ್ದರಿಂದ ಕಲ್ಕಿ ಭವಿತವ್ಯದ ಪುರಾಣಪುರುಷ, ಅವನು ಸೂಪರ್‌ಹೀರೊ ಆಗಿರಬಹುದು ಎಂಬ ಭಾವನೆ ಬಹುತೇಕರಲ್ಲಿ ಮೊಳೆಯುವಂತೆ ನೋಡಿಕೊಂಡರು. ನಾಯಕನ ಪಾತ್ರದ ಹೆಸರು ಭೈರವ. ಇನ್ನೊಂದು ಕಡೆ ಅಶ್ವತ್ಥಾಮನ ಪಾತ್ರಕ್ಕೆ ಅದೇ ಹೆಸರು. ಅಲ್ಲಿಗೆ ಪುರಾಣ ಹಾಗೂ ವಾಸ್ತವವನ್ನು ಬೆಸೆಯುವ ಜಾಣತಂತ್ರವೊಂದನ್ನು ನಿರ್ದೇಶಕರು ಕಣ್ಣಿಗೊತ್ತಿಕೊಂಡಂತೆ ಆಯಿತು.

ಚಿತ್ರದ ಮೊದಲರ್ಧದಲ್ಲಿ ನಾವು ಇದುವರೆಗೆ ಕಂಡೇ ಇರದ ವಾಹನಗಳು ರಾಚುತ್ತವೆ. ರಾಜಮೌಳಿ, ರಾಮ್‌ಗೋಪಾಲ್ ವರ್ಮ ಶೈಲಿಯನ್ನು 'ವಿಟ್' ಮೂಲಕ ಗೇಲಿ ಮಾಡಲಾಗುತ್ತದೆ. ಗಂಗಾನದಿಯೂ ಸಂಪೂರ್ಣ ಬತ್ತಿಹೋದ, ಪ್ರಕೃತಿಯನ್ನೆಲ್ಲ ಮನುಷ್ಯ ಹೀರಿಹಾಕಿದ ಉತ್ಪ್ರೇಕ್ಷಿತ ಸತ್ಯವೊಂದು ದೃಶ್ಯವತ್ತಾಗಿ ಮೂಡುತ್ತದೆ. ಆಗೊಮ್ಮೆ ಈಗೊಮ್ಮೆ ಒಂದು ಮಾತನಾಡುವ ಸ್ನಿಗ್ಧ ಸೌಂದರ್ಯದ ದೀಪಿಕಾ ಪಡುಕೋಣೆ ಕಾಡುತ್ತಾ ಹೋಗುತ್ತಾರೆ. ನಾವು ಹಿಂದೆಂದೂ ಕಂಡೇ ಇರದ ರೀತಿ ಕಮಲ ಹಾಸನ್ ಗಾಳಿಯಲ್ಲಿ ಪದ್ಮಾಸನ ಹಾಕಿಕೊಂಡು ಕುಳಿತಿರುತ್ತಾರೆ. ಸೂಪರ್‌ಸ್ಟಾರ್ ಪ್ರಭಾಸ್‌ಗೆ ಅಮಿತಾಭ್ ಬಚ್ಚನ್ ಎಕ್ಕಾಮಕ್ಕಾ ಇಕ್ಕುತ್ತಾರೆ. ಈ ಕಾಲದ ಶತಕೋಟಿ ತಾರೆಗೆ ಆ ಕಾಲದ ನೀಳಕಾಯದ ತಾರೆಯಿಂದ ಹೀಗೆ ಇಕ್ಕಿಸುವ ಮೂಲಕ ನಿರ್ದೇಶಕರು 'ಇಗೋ'ಗಳ ಬಲೂನುಗಳನ್ನು ಕೂಡ ಒಡೆಯುತ್ತಾರೆ. ಅನ್ನಾ ಬೆನ್ ಎಂಬ ಮಲಯಾಳದ ಹೊಸ ಹುಡುಗಿಯನ್ನು ಆ್ಯಕ್ಷನ್ ಕ್ವೀನ್ ತರಹ ತೋರಿಸುತ್ತಾರೆ. ತನ್ನ ಕೊನೆಗಾಲದಲ್ಲೂ ಪ್ರಿಯಕರನಿಂದ ಒಂದು ನಗೆ ಬಯಸುತ್ತಲೇ ಮುಗುಳ್ನಗುವ ಅವಳೊಂದು ಬಾನದಾರಿಯ ತಾರೆಯಂತೆ ಮುಷ್ಟಿಗೆ ಬಿದ್ದುಬಿಡುತ್ತಾಳೆ. ಬುಜ್ಜಿ ಎಂಬ ವಾಹನಕ್ಕೆ ಕಂಠದಾನ ಮಾಡುವ ಮೂಲಕ ಕೀರ್ತಿ ಸುರೇಶ್ ಎಂಬ ಸುಂದರ ನಟಿಯ ಬೇರೆ ರೀತಿಯ ರುಜುವೂ ಕಾಣುತ್ತದೆ.

'ಕಲ್ಕಿ'ಯನ್ನು ನಾಗ್ ಅಶ್ವಿನ್ ಕೇವಲ ಪ್ರಭಾಸ್ ಸಿನಿಮಾ ಆಗಲು ಬಿಟ್ಟಿಲ್ಲ. ಅದು ಅಡಿಗಡಿಗೂ ಟೀಸರ್ ತರಹ ಇದೆ. ಮೊದಲರ್ಧದಲ್ಲಿ ಪ್ರಭಾಸ್ ಉಪಸ್ಥಿತಿಯೇ ಕಡಿಮೆ. ಎರಡನೇ ಅರ್ಧದಲ್ಲಿ ಅವರಿಗಿಂತ ಹೆಚ್ಚಾಗಿ ಅಮಿತಾಭ್ ಬಚ್ಚನ್ ಸೂಪರ್‌ಹೀರೊ ಆಗಿ ಪ್ರಕಟವಾಗುವ ಪರಿಯಲ್ಲೇ ಅಚ್ಚರಿ ಇದೆ. ಈ ವಯಸ್ಸಿನಲ್ಲಿ ಅಮಿತಾಭ್ ಅವರನ್ನು ಹೀಗೆ ತೋರಬಹುದು ಎಂಬ ಕಲ್ಪನೆಯೇ ಫ್ಯಾಂಟಸಿ.

ಹಾಗೆಂದಮಾತ್ರಕ್ಕೆ ಈ ಸಿನಿಮಾ ಕುಶಲಮಾದರಿ ಎನ್ನುವಂತೆಯೂ ಇಲ್ಲ. ಸಂಗೀತವು ಪಾತ್ರವಾಗಿಲ್ಲ. ದೀಪಿಕಾ ಚೆಂದವಾಗಿ ಕಂಡರೂ ಅನ್ಯಮನಸ್ಕರಂತೆ ಪ್ರಕಟಗೊಂಡಿದ್ದಾರೆ. ಪ್ರಭಾಸ್ ನಟನೆ ಸಾಲದು, ಕುಣಿತವಂತೂ ಸ್ವಲ್ಪವೂ ಬಾರದು ಎನ್ನುವುದನ್ನೂ ಕ್ಯಾಮೆರಾ ಸ್ಪಷ್ಟಪಡಿಸಿದೆ. ಅಮಿತಾಭ್ ಈಗ ಕೃತಾರ್ಥರಾಗಿದ್ದಾರೆ. ಪ್ರಭಾಸ್‌ಗೆ ಸಾವಿರ ಕೋಟಿ ಗಳಿಕೆಯ ಸಿನಿಮಾ ಸಹಜವಾಗಿರಬಹುದು, ತಮ್ಮ ಸ್ಥಿತಿ ಹಾಗಲ್ಲ ಎಂದು ಅವರು ಹೇಳಿರುವುದಕ್ಕೆ ಅರ್ಥವಿದೆ.

ರಾಜಮೌಳಿ, ಶಂಕರ್ ಮಾದರಿಗೆ ಹೊರತಾದ ಏನೋ ಒಂದನ್ನು ನಾಗ್ ಅಶ್ವಿನ್ ತೇಲಿಬಿಟ್ಟಿದ್ದಾರೆ. ದಕ್ಷಿಣ ಭಾರತದ ಬೇರು–ಕಾಂಡ–ಚಿಗುರು ಅವರ ಈ ಮಹತ್ವಾಕಾಂಕ್ಷಿ ಶಿಲ್ಪದ ಭಾಗವಾಗಲು ಒಪ್ಪಿರುವುದು ಕಣ್ಣರಳಿಸುವಂತಹ ವಿದ್ಯಮಾನ.

'ಕಲ್ಕಿ'ಯ ಮುಂದಿನ ಭಾಗದಲ್ಲಿ ಕಮಲ ಹಾಸನ್ ಹೇಗೆ ಕಂಡಾರು? ಅವರೇನು ಶ್ರೀಕೃಷ್ಣನೋ, ಭವಿತವ್ಯದ ಯಾಸ್ಕಿನ್ನೋ? ದೀಪಿಕಾ ಜನ್ಮ ನೀಡುವುದು ಯಾರಿಗೆ?

ನೋಡಿದವರೆಲ್ಲ ಹೀಗೆ ಪ್ರಶ್ನೆಗಳನ್ನು ಪೋಣಿಸುತ್ತಲೇ ಹೋಗಬಹುದು. ಹೊಗಳಬಹುದು, ಕೆದಕಬಹುದು, ಟೀಕಿಸಲೂಬಹುದು. ಸಿನಿಮಾ ಹೀಗೆ ಮಾತಿಗೆ ಹಚ್ಚಬೇಕು... ಅಲ್ಲವೆ?

ಪ್ರತಿಕ್ರಿಯಿಸಿ: feedback@sudha.co.in